ವೇಷ ಕಳಚಿ ಮನೆಗೆ ಬಂದು ಅಡುಗೆ ಮಾಡಿ ಮಗಳಿಗೆ ಬಡಿಸಿ ನೆರೆಮನೆಯಲ್ಲಿ ಬಿಟ್ಟು, ಮತ್ತೆ ಮೈಲುಗಟ್ಟಲೆ ನಡೆದು ರಾತ್ರಿಯಗುತ್ತಲೇ ಮೇಳದ ಬಿಡಾರವನ್ನು ಸೇರುವುದು ದಿನಚರಿಯಾಯಿತು.

ಬಹುಶಃ ಇದೇ ಕಾರಣವಿರಬೇಕು. ಹೆತ್ತ ತಾಯಿಯ ಪ್ರೀತಿಯೇನೆಂದೇ ಕಾಣದ, ಅತ್ತ ತಂದೆಯ ಎದೆ ಬಿಸಿಗೆ ತಬ್ಬಿ ಮಲಗುವ ಸುಖವನ್ನೇ ಅರಿಯದ ಮಗಳು ಸಹಜವಾಗಿಯೇ ಬಹುಬೇಗ ಹುಚ್ಚು ಹರೆಯದ ಪ್ರೀತಿಗೆ ಮರುಳಾಗಿ ರಸ್ತೆಗೆ ಡಾಂಬರು ಹಾಕಲು ಬಂದಿದ್ದ ಯಾವುದೋ ಹುಡುಗನ ಜೊತೆಗೆ ಮನೆ ಬಿಟ್ಟು ಓಡಿ ಹೋಗಿದ್ದಳು. ಅಲ್ಲಿಗೆ ಮಗಳು, ಮನೆಯೆನ್ನುವ ಬಂಧನ ಸಂಪೂರ್ಣವಾಗಿ ಕಳಚಿಬಿತ್ತು. ಚೌಕಿಯೇ ಮನೆ, ಕಲಾವಿದರೇ ಕುಟುಂಬ. ಮೊದಮೊದಲು ಮಗಳು ಓಡಿಹೋಗಿದ್ದು ಅವರಿವರು ಕೇಳಿದಾಗ ಇರಿಸುಮುರುಸಾದರೂ, ಕ್ರಮೇಣ ರೂಢಿಯಾಯಿತು.

ಮೇಳದ ತಿರುಗಾಟದ ಸಮಯದಲ್ಲಿ ವೇಷ ಮಾಡಿದರೆ, ಮೇಳ ಒಳಗೆ ಸೇರಿದ ಮೇಲೆ ಮಳೆಗಾಲ ಪೂರ್ತಿ ಮೇಳದ ಯಜಮಾನರ ಮನೆಯ ತೋಟದ ಕೆಲಸ. ವೇಷಕ್ಕೂ ತೋಟದ ಕೆಲಸಕ್ಕೂ ಸಂಬಳವೆನ್ನುವ ಪ್ರಶ್ನೆ ಬಂದಾಗ ಮಾಧವ ನಯಾಪೈಸೆ ಮುಟ್ಟುತ್ತಿರಲಿಲ್ಲ. ಮೂರು ಹೊತ್ತಿನ ಊಟ ಕೊಡಿ ಧಣಿ ನಿಮ್ಮನ್ನೇ ದೇವರೆಂದುಕೊಂಡು ಬದುಕುತ್ತೇನೆ ಎನ್ನುತ್ತಾ ಕಳೆದ ಹದಿನೈದು ವರ್ಷದಿಂದ ಯಾವ ಆಳಿಗೂ ಕಡಿಮೆಯಿಲ್ಲದೆ ದುಡಿದಿದ್ದ. ಆದರೆ, ಕಾಲ ಒಂದೇ ರೀತಿ ಇರುತ್ತದೆಯೇ? ಆಳಾಗುವುದೇನೋ ಸುಲಭ, ದೇವರಾಗುವುದು ಸುಲಭವೇ?

ಮೊನ್ನೆ ಮೊನ್ನೆಯವರೆಗೆ ಎಲ್ಲವೂ ಸರಿಯಿದೆಯೆನ್ನುವಾಗ, ತೋಟದಲ್ಲಿ ಎಡವಿ ಬಿದ್ದು ಒಂದು ಕೈ ಮುರಿದಿದ್ದೇ ಕಾರಣವಾಯಿತು. ಅಂದೇ ಯಜಮಾನರ ಹೆಂಡತಿ ಈಗೇನೋ ಕೈ ಮುರಿಯಿತು, ಮುಂದೆ ಹಾಸಿಗೆ ಹಿಡಿದರೆ ಗೊತ್ತು ಗುರಿಯಿಲ್ಲದವರನ್ನು ನೋಡಿಕೊಳ್ಳುವುದಕ್ಕೆ ನನ್ನಿಂದ ಸಾಧ್ಯವಿಲ್ಲ ಅಂತ ಯಜಮಾನರ ಜೊತೆ ದೊಡ್ಡ ರಂಪವನ್ನೇ ಮಾಡಿದಳು. ಮರುದಿನ ಮಾಧವನ ಕೈಗೆ ಒಂದಷ್ಟು ನೋಟು ತುರುಕಿ ಅಳೆದು ತೂಗಿ ಎಲ್ಲೆಲ್ಲೋ ನೋಡುತ್ತಾ, 'ಮನೆಬಿಟ್ಟು ಹೋಗು ಮಾಧವ' ಎಂಬುದನ್ನು ಯಜಮಾನರು ಸೂಚ್ಯವಾಗಿ ನುಡಿದಿದ್ದರು.

***

''ಬದುಕಿನಲ್ಲಿ ಎಲ್ಲವನ್ನೂ ನೋಡಿಯಾಯ್ತು ಸುಬ್ರಾಯ. ಈ ಇಷ್ಟ, ನಿಷ್ಠೆ, ಪ್ರಾಮಾಣಿಕತೆಗಳೆಲ್ಲವೂ ಪೊಳ್ಳು ಕತೆಗಳಷ್ಟೇ. ಯಾವುದೂ ಬದುಕಿಗೆ ಹೇಳಿದ್ದಲ್ಲ. ಮೇಳವನ್ನೂ, ಮೇಳದ ಯಜಮಾನರನ್ನೂ ಸ್ವಂತ ತಂದೆಯ ಸ್ಥಾನದಲ್ಲಿಟ್ಟು ಪ್ರೀತಿಸಿದೆ. ಈ ಜೀವ ಬಿದ್ದು ಹೋಗುವ ತನಕ ಮೂರು ಬಿಡು, ಒಪ್ಪೊತ್ತಿನ ಊಟವಾದರೂ ಸಿಕ್ಕೀತು ಎನ್ನುವ ನಂಬಿಕೆಯಿತ್ತು ಸುಬ್ರಾಯ. ಒಂದು ದಿಗಿಣಕ್ಕೆ ಇಪ್ಪತ್ತು ಶಿಳ್ಳೆಗಳನ್ನು, ಸಾವಿರ ಚಪ್ಪಾಳೆಗಳನ್ನು ತಟ್ಟಿ, ನಿಮ್ಮ ಅಭಿಮಾನಿಗಳೆಂದು ಮುಗಿಬಿದ್ದು ಮಾತನಾಡಿಸಿದವರೆಲ್ಲರೂ ಕೂಡಾ, ಈಗ ಯಾರೋ ಹೊಸಬರಿಗೆ ಚಪ್ಪಾಳೆ ತಟ್ಟುತ್ತಾ ಈ ಹಳೆಬೇರನ್ನು, ಮರೆತೇಬಿಟ್ಟರು ಸುಬ್ರಾಯ. ಒಂದು ಕಾಲದಲ್ಲಿ ಯಜಮಾನರ ಹಣ ಗಳಿಕೆಯ ಸಾಧನವಾಗಿದ್ದ ನಾನು, ಕೊನೆಗಾಲಕ್ಕೆ ದಿಕ್ಕು ದೆಸೆಯಿಲ್ಲದ ತಿರುಕನಾಗಿ ಹೋದೆ.

ಸುಬ್ರಾಯ ಅಮ್ಮ ಸತ್ತಾಗ, ಹೆಂಡತಿಯನ್ನು ಕಳೆದುಕೊಂಡಾಗ, ಅಷ್ಟೇ ಯಾಕೆ? ಸರ್ವಸ್ವವಾಗಿದ್ದ ಮಗಳು ಓಡಿ ಹೋದಾಗಲೂ, ಬದುಕು ಇಲ್ಲಿಗೇ ಕೊನೆ ಅನ್ನಿಸಿರಲಿಲ್ಲ. ಆದರೆ, ಈಗ... ಈಗ...''

ಅಷ್ಟೂ ವರ್ಷಗಳ ಕಾಲ ತಪಸ್ಸಿನಂತೆ ತಡೆದುಕೊಂಡಿದ್ದ ದುಃಖ ಒಮ್ಮೆಲೇ ಹೊರಬಂದು ಮುದಿ ಜೀವ ಕಂಪಿಸುತ್ತಾ ಅಳತೊಡಗಿತು. ಒಂಟಿ ಕೈಯಲ್ಲಿ ಅಷ್ಟೋ ಇಷ್ಟೋ ಚಿಕ್ಕ ಮಗುವಿನಂತೆ ಕಣ್ಣು ಮೂಗು ಒರೆಸುತ್ತಾ ಬಿಕ್ಕಿ, ಬಿಕ್ಕಿ ಅಳುವುದನ್ನು ನೋಡಿ ಹೊಟ್ಟೆ ಕಿವುಚಿದಂತಾಯಿತು.

ಯಾವ ಉದ್ವೇಗಗಳೂ ಇಲ್ಲದೇ ತನ್ನದೇ ಲಯದಲ್ಲಿ ಸುಗಂಧಿನಿ ಹರಿಯುತ್ತಿದ್ದರೆ, ಎದ್ದು ನಿಂತ ಮಾಧವ ಪಶ್ಚಿಮ ದಿಗಂತದ ಸಂಜೆ ಬೆಳಕನ್ನು ದಿಟ್ಟಿಸುತ್ತಾ ನಡೆಯತೊಡಗಿದರು. 'ಮಾಧವ ಬನ್ನಿ ನನ್ನ ಮನೆಗೆ' ಎಂಬ ಮಾತು ಹೃದಯದಿಂದ ಹೊರಟು ನಾಲಗೆಯವರೆಗೆ ಬಂದರೂ, 'ಸುಮ್ಮನಿರು ನಿನಗೂ ಹೆಂಡತಿ ಮಕ್ಕಳಿದ್ದಾರೆ' ಎಂದು ವಿವೇಕ ನೆನಪಿಸಿತು. ●